ಎಸ್.ಎಸ್.ಎಲ್.ಸಿ.

ಉತ್ತಮ ಫಲಿತಾಂಶಕ್ಕೆ ಸಿದ್ಧತೆ....

ವಿಷಯ: ಸಮಾಜವಿಜ್ಞಾನ

ವಿಭಾಗವಾರು ಅಭ್ಯಾಸ ಪತ್ರಿಕೆಗಳು

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ-01(ಇತಿಹಾಸ ವಿಭಾಗ ಪತ್ರಿಕೆ-1)

ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **8x1=8**

1.ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್

(a)ಲಾರ್ಡ್ ಕರ್ಜನ್ (b)ಲಾರ್ಡ್ ವೆಲ್ಲೆಸ್ಲಿ(c)ಲಾರ್ಡ್ ಡಾಲ್ ಹೌಸಿ (d)ಲಾರ್ಡ್ ಕಾರ್ನ್ ವಾಲಿಸ್

2.1935 ರ ಭಾರತ ಸರ್ಕಾರ ಕಾಯಿದೆಯು ಸ್ವಾತಂತ್ರ್ಯ ಭಾರತಕ್ಕೆ ಮುಖ್ಯ ದಾಖಲೆಯಾಗಿದೆ.ಏಕೆಂದರೆ

(a)ಪ್ರಾಂತ್ಯಗಳಲ್ಲಿ ದ್ವಿಸರ್ಕಾರವನ್ನು ಜಾರಿಗೆ ತಂದಿತು (b)ನಿಯಂತ್ರಣ ಮಂಡಳಿಯನ್ನು ನೇಮಿಸಿತು

(c)ಮತೀಯ ಆಧಾರದಲ್ಲಿ ಪ್ರತ್ಯೇಕ ಮತಕ್ಷೇತ್ರಕ್ಕೆ ಅವಕಾಶ (d)ಅಖಿಲ ಭಾರತೀಯ ಸಂಯುಕ್ತ ವ್ಯವಸ್ಥೆಗೆ ಅವಕಾಶ ಕಲ್ಪಿಸಿತು

3. ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಗೆ ಕಾರಣವಾದ ಶಾಸನ

(a)1773 ರ ಶಾಸನ (b)1909 ರ ಶಾಸನ (c)1935 ರ ಶಾಸನ (d)1919 ರ ಶಾಸನ

4.ಈ ಶಾಸನವು ಮತೀಯ ಆಧಾರದ ಮೇಲೆ ಪ್ರತ್ಯೇಕ ಚುನಾವಣೆಗೆ ಅವಕಾಶ ಕಲ್ಪಿಸಿತು

(a)1919 ರ ಜೇಮ್ಸಫರ್ಡ್ ಸುಧಾರಣೆ (b)1935 ರ ಶಾಶನ

(c)1909 ರ ಮಿಂಟೋ-ಮಾರ್ಲೆ ಸುಧಾರಣೆಗಳು(d)1773 ರ ಶಾಸನ

5. ಎರಡನೇ ಆಂಗ್ಲೋ-ಮರಾಠ ಯುದ್ಧವು ಈ ಒಪ್ಪಂದದಿಂದ ಕೊನೆಗೊಂಡಿತು.

(a)ಅಮೃತಸರ ಒಪ್ಪಂದ (b)ಪಂಜಾಬ್ ಒಪ್ಪಂದ (c)ಬೆಸ್ಸಿನ್ ಒಪ್ಪಂದ (d)ಸಾಲ್ಬಾಯಿ ಒಪ್ಪಂದ

6.ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಪ್ರತಿಪಾದಿಸಿದವರು

(a)ಆನಿಬೆಸೆಂಟ್ (b)ಪರಮಹಂಸ (c)ದಯಾನಂದ ಸರಸ್ವತಿ (d)ಜ್ಯೋತಿಭಾ ಫುಲೆ

7.'ಎ' ಪಟ್ಟಿಯಲ್ಲಿ ನಾಯಕರ ಹೆಸರು 'ಬಿ' ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಕೊಡಲಾಗಿದೆ.ಸರಿಯಾದ ಗುಂಪನ್ನು ಆರಿಸಿ ಬರೆಯಿರಿ.

ಎ ಪಟ್ಟಿ	ಬಿ ಪಟ್ಟಿ	
1.ರಾಜಾರಾಮ್ ಮೋಹನರಾಯ್	(a)ಆರ್ಯ ಸಮಾಜ	(a)1-b,2-c,3-d,4-a
2.ದಯಾನಂದ ಸರಸ್ವತಿ	(b)ರಾಮಕೃಷ್ಣ ಮಿಷನ್	(b) 1-d,2-a,3-b,4-c
3.ಸ್ವಾಮಿ ವಿವೇಕಾನಂದ	(c)ಸತ್ಯಶೋಧಕ ಸಮಾಜ	(c) 1-b,2-c,3-d,4-a
4.ಜ್ಯೋತಿಭಾ ಫುಲೆ	(d)ಬ್ರಹ್ಮ ಸಮಾಜ	(d) 1-c,2-b,3-d,4-a

8.'ಎ' ಪಟ್ಟಿಯಲ್ಲಿ ನಾಯಕರ ಹೆಸರು 'ಬಿ' ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಕೊಡಲಾಗಿದೆ.ಸರಿಯಾದ ಗುಂಪನ್ನು ಆರಿಸಿ ಬರೆಯಿರಿ.

ಎ ಪಟ್ಟಿ	ಬಿ ಪಟ್ಟಿ	
1.ರಾಜಾರಾಮ್ ಮೋಹನರಾಯ್	(a)ಸತ್ಯಾರ್ಥ ಪ್ರಕಾಶನ	(a)1-b,2-c,3-d,4-a
2.ದಯಾನಂದ ಸರಸ್ವತಿ	(b)ನ್ಯೂ ಇಂಡಿಯಾ	(b) 1-c,2-b,3-d,4-a
3.ಆನಿಬೆಸೆಂಟ್	(c)ಗುಲಾಮಗಿರಿ	(c) 1-d,2-a,3-b,4-c
4.ಜ್ಯೋತಿಭಾ ಫುಲೆ	(d)ಸಂವಾದಿ ಕೌಮದಿ	(d) 1-b,2-c,3-d,4-a

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **8x1=8**

9.ಕಾಲಚಕ್ರ ಎಂದರೇನು?

10.ಭಾರತ ಹೆಚ್ಚು ಲಿಖಿತ ಆಕರಗಳನ್ನು ಹೊಂದಿರಲಿಲ್ಲ.ಏಕೆ ?

11.ಜನಪದ ಚರಿತ್ರೆಗೆ ದಾಖಲೆಗಳೇ ಮುಖ್ಯವಲ್ಲ.ಏಕೆ?

12.ಖಾಲ್ಸಾ ಸೈನಿಕರು ಬ್ರಿಟಿಷರ ವಿರುದ್ಧ ದಂಗೆ ಏಳಲು ಕಾರಣವೇನು?

13.ಬ್ರಿಟಿಷರು ಭಾರತದಲ್ಲಿ ಹೂಡಿದ ಕೈಗಾರಿಕಾ ಬಂಡವಾಳದ ಪರಿಣಾಮವೇನು ?

14.ದಯಾನಂದ ಸರಸ್ವತಿಯವರು ಭಾರತೀಯರಿಗೆ ವೇದಗಳಿಗೆ ಹಿಂದಿರುಗಿ ಎಂದು ಕರೆ ನೀಡಲು ಕಾರಣವೇನು?

15.ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಅನ್ನು ಏಕೆ ಸ್ಥಾಪಿಸಿದರು ?

16.ಥಿಯಾಸಾಫಿಕಲ್ ಸೊಸೈಟಿಯ ಮೂಲ ಸ್ಥಾಪಕರು ಯಾರು?

III.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **12x2=24**

17.ವೈಜ್ಞಾನಿಕ ಬೆಳವಣಿಗೆಯು ಸಮುದ್ರಯಾನಕ್ಕೆ ಕಾರಣವಾಯಿತು.ಈ ಹೇಳಿಕೆಯನ್ನು ಸಮರ್ಥಿಸಿ

18.ರಾಬರ್ಟ್ ಕ್ಲೈವ್ ಜಾರಿಗೆ ತಂದ ದ್ವಿಸರ್ಕಾರ ಪದ್ಧತಿಯನ್ನು ವಿವರಿಸಿ

19.ಬಕ್ಸಾರ್ ಕದನದ ಪರಿಣಾಮಗಳೇನು?

20.4 ನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣಗಳೇನು?

21.ಹೈದರಾಬಾದಿನ ನಿಜಾಮ ಹೇಗೆ ಸ್ವಾತಂತ್ರ್ಯನಾದನು?

22.ಇಂಗ್ಲಿಷರು ಮದ್ರಾಸ್ ಒಪ್ಪಂದಕ್ಕೆ ಸಹಿ ಹಾಕುವುದು ಏಕೆ ಅನಿವಾರ್ಯವಾಯಿತು?

23.ಶ್ರೀರಂಗ ಪಟ್ಟಣ ಒಪ್ಪಂದದ ಷರತ್ತುಗಳೇನು?

24.ಭಾರತೀಯ ಸಮಾಜಕ್ಕೆ ಅನಿಬೆಸೆಂಟರು ನೀಡಿದ ಕೊಡುಗೆಗಳೇನು?

25.ಸರ್.ಸೈಯ್ಯದ್ ಅಹಮ್ಮದ್ ಖಾನ್ ರವರು ನೀಡಿದ ಕೊಡುಗೆಗಳೇನು?

26.ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ತಿಳಿಸಿ.

27.ಜುನಾಗಡ ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ಹೇಗೆ ವಿಲೀನವಾಯಿತು?

28.ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮುಕ್ತಿಗೊಳಿಸಲಾಯಿತು?

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ-02(ಇತಿಹಾಸ ವಿಭಾಗ ಪತ್ರಿಕೆ-2)

	ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **10x1=10**

1.ಗೋವಾವನ್ನು ಪೋರ್ಚುಗೀಸರಿಂದ ವಿಮೋಚನೆಗೊಳಿಸಿದ ವರ್ಷ (a)1947 (b)1956 (c)1961 (d)1953

2.ರಾಜ್ಯ ಪುನರ್ವಿಂಗಡಣಾ ಕಾಯ್ದೆ ಜಾರಿಗೆ ಬಂದ ವರ್ಷ
(a)1956(b)1965 (c)1953 (d)1978

3. ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದದ್ದು
(a)ನವಂಬರ್ 1-1956 (b)ಜನವರಿ 1-1956 (c)ನವಂಬರ್ 1-1973 (d)ಜನವರಿ 26-1950

4.ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತಿಯಾಗಿದ್ದ ಭಾರತದ ಪ್ರಥಮ ಗೃಹಮಂತ್ರಿ
(a)ನೆಹರು(b)ಮೌಲಾನಾ ಅಬುಲ್ ಕಲಾಂ ಅಜಾದ್ (c)ಅಂಬೇಡ್ಕರ್ (d)ಸರ್ದಾರ್ ವಲ್ಲಭಭಾಯಿ ಪಟೇಲ್

5. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದವರು
(a)ಸ್ಟಾಲಿನ್(b)ಲೆನಿನ್(c)ಗೋರ್ಬಚೇವ್(d)ಮುಸೋಲಿನಿ

6.ಚೀನಾದಲ್ಲಿ ನಡೆದ ಈ ಘಟನೆಯನ್ನು ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲಿಯೇ ಅತ್ಯಂತ ವಿಶಿಷ್ಟವಾದ ಪ್ರಯೋಗವೆಂದು ಪರಿಗಣಿಸಲಾಗಿದೆ.
(a)ಕಮ್ಯುನಿಷ್ಟರ ದೀರ್ಘ ಪ್ರಯಾಣ (b)ಮುನ್ನಡೆಯ ಮಹಾ ಜಿಗಿತ (c)ಸಾಂಸ್ಕೃತಿಕ ಕ್ರಾಂತಿ (d)ಪ್ರಜಾಪ್ರಭುತ್ವಕ್ಕಾಗಿ ಕ್ರಾಂತಿ

7.ನಮ್ಮ ಸಂವಿಧಾನಕ್ಕೆ ಜಾತ್ಯಾತೀತ ಮತ್ತು ಸಮಾಜವಾದಿ ಎಂಬ ಎರಡು ಅಂಶಗಳನ್ನು ಸೇರಿಸಿದ್ದು
(a)44 ನೇ ತಿದ್ದುಪಡಿ (b)42 ನೇ ತಿದ್ದುಪಡಿ (c)86 ನೇ ತಿದ್ದುಪಡಿ (d)32 ನೇ ತಿದ್ದುಪಡಿ

8.'ಎ' ಪಟ್ಟಿಯಲ್ಲಿ ನಾಯಕರ ಹೆಸರು 'ಬಿ' ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಕೊಡಲಾಗಿದೆ.ಸರಿಯಾದ ಗುಂಪನ್ನು ಆರಿಸಿ ಬರೆಯಿರಿ.

ಎ ಪಟ್ಟಿ	ಬಿ ಪಟ್ಟಿ	
1.ವಲ್ಲಭಭಾಯಿ ಪಟೇಲ್	(a)ತಾತ್ಕಾಲಿಕ ಸರ್ಕಾರ ರಚನೆ	(a)1-b,2-c,3-d,4-a
2.ಷೇಕ್ ಅಬ್ದುಲ್ಲಾ	(b)ದೇಶೀಯ ಸಂಸ್ಥಾನಗಳ ವಿಲೀನೀಕರಣ	(b) 1-d,2-a,3-b,4-c
3.ಪೊಟ್ಟಿಶ್ರೀರಾಮುಲು	(c)ಕಾಶ್ಮೀರ ಸ್ವಾತಂತ್ರ್ಯಕ್ಕಾಗಿ ಹೋರಾಟ	(c) 1-b,2-c,3-d,4-a
4.ಜವಹಾರಲಾಲ್ ನೆಹರು	(d)ವಿಶಾಲಾಂಧ್ರ ರಚನೆಗೆ ಹೋರಾಟ	(d) 1-c,2-b,3-d,4-a

9.'ಎ' ಪಟ್ಟಿಯಲ್ಲಿ ನಾಯಕರ ಹೆಸರು 'ಬಿ' ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಕೊಡಲಾಗಿದೆ.ಸರಿಯಾದ ಗುಂಪನ್ನು ಆರಿಸಿ ಬರೆಯಿರಿ.

ಎ ಪಟ್ಟಿ	ಬಿ ಪಟ್ಟಿ	
1.ಫಸಲ್ ಆಲಿ	(a)ಪ್ರಥಮ ರಾಷ್ಟ್ರಾಧ್ಯಕ್ಷರು	(a)1-b,2-c,3-d,4-a
2.ಬಾಬು ರಾಜೇಂದ್ರ ಪ್ರಸಾದ್ ಸರಸ್ವತಿ	(b)ಕೇಸರಿ ಮತ್ತು ಮರಾಠ ಪತ್ರಿಕೆ	(b) 1-c,2-b,3-d,4-a
3.ಬಾಲಗಂಗಾಧರ ತಿಲಕ್	(c)ಮೊದಲ ಗವರ್ನರ್ ಜನರಲ್	(c) 1-d,2-a,3-b,4-c
4.ರಾಜಗೋಪಾಲಾಚಾರಿ	(d)ರಾಜ್ಯ ಪುನರ್ವಿಂಗಡಣೆ	(d) 1-b,2-c,3-d,4-a

10.'ಎ' ಪಟ್ಟಿಯಲ್ಲಿ ನಾಯಕರ ಹೆಸರು 'ಬಿ' ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಕೊಡಲಾಗಿದೆ.ಸರಿಯಾದ ಗುಂಪನ್ನು ಆರಿಸಿ ಬರೆಯಿರಿ.

ಎ ಪಟ್ಟಿ	ಬಿ ಪಟ್ಟಿ	
1.ಸ್ಟಾಲಿನ್	(a)ಫ್ಯಾಸಿಸ್ಟ್ ಪಕ್ಷ	(a)1-b,2-c,3-d,4-a
2.ಗೋರ್ಬಚೆವ್	(b)ಪಂಚವಾರ್ಷಿಕ ಯೋಜನೆ	(b) 1-c,2-b,3-d,4-a
3.ಹಿಟ್ಲರ್	(c)ಗ್ಲಾಸ್ ನೋಸ್ತ್	(c) 1-d,2-a,3-b,4-c
4.ಮುಸೋಲಿನಿ	(d)ನಾಜಿ ಪಕ್ಷ	(d) 1-b,2-c,3-d,4-a

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

8x1=8

11.ಭಾರತದ ಪ್ರದೇಶವೊಂದರ ಮೇಲೆ ಸುದೀರ್ಘ ಅವಧಿಯವರೆಗೆ ಆಳ್ವಿಕೆ ನಡೆಸಿದ ಯುರೋಪಿನ ದೇಶ ಯಾವುದು?

12.ಅಮೆರಿಕಾ ದ್ವಿತೀಯ ಮಹಾಯುದ್ಧ ಪ್ರವೇಶಿಸಲು ಕಾರಣವೇನು?

13.19 ನೇ ಶತಮಾನದಲ್ಲಿ ರಷ್ಯಾವನ್ನು ಆಳಿದ ದೊರೆಗಳು ಯಾರು?

14.ಶೀತಲ ಸಮರ ಎಂದರೇನು ?

15.ಕಾಶ್ಮೀರದ ವಾಯುವ್ಯ ಭಾಗವನ್ನು ಏನೆಂದು ಕರೆಯುತ್ತಾರೆ ?

16.ಜಪಾನ್ ಪೂರ್ಣವಾಗಿ ಶರಣಾಗಿದ್ದು ಯಾವಾಗ ?

17.ಮೊದಲನೇ ಮಹಾಯುದ್ಧಕ್ಕೆ ತತ್ ಕ್ಷಣದ ಕಾರಣವೇನು?

18.ಹೈದರಾಬಾದಿನ ನಿಜಾಮ ಭಾರತದ ಒಕ್ಕೂಟದೊಂದಿಗೆ ಸೇರಲು ಒಪ್ಪಲಿಲ್ಲ.ಏಕೆ ?

III.ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **4x2=8**

19.ಮೊದಲನೇ ಮಹಾಯುದ್ಧದ ಪರಿಣಾಮಗಳೇನು?

20.ಚೀನಾ ಕ್ರಾಂತಿಯ ನಂತರ ಹೇಗೆ ಅಭಿವೃದ್ಧಿ ಸಾಧಿಸಿತು?

21.ರಷ್ಯಾ ಕ್ರಾಂತಿಗೆ ಕಾರಣಗಳೇನು?

22.ಲೆನಿನ್ ರಷ್ಯಾದಲ್ಲಿ ತಂದ ಸುಧಾರಣೆಗಳನ್ನು ತಿಳಿಸಿ.

IV.ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **2x3=6**

23.1857 ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ವಿಫವವಾಗಲು ಕಾರಣಗಳೇನು?

ಅಥವಾ

ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳನ್ನು ವಿವರಿಸಿ

24.1857 ರ ದಂಗೆಗೆ ರಾಜಕೀಯ ಹಾಗೂ ಸೈನಿಕ ಅಂಶಗಳು ಹೇಗೆ ಪ್ರೇರಕವಾದವು? ವಿವರಿಸಿ.

ಅಥವಾ

ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯು ಭಾರತದ ಅರ್ಥವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಿತು.
ಸಮರ್ಥಿಸಿ.

V.ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ. **2x4=8**

25.ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರ ಪ್ರತಿಭಟನೆಗಳನ್ನು ವಿವರಿಸಿ

26. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವನ್ನು ವಿವರಿಸಿ

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ–03(ರಾಜ್ಯಶಾಸ್ತ್ರ ವಿಭಾಗ)

ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **10x1=10**

1.ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪನೆಯಾದ ವರ್ಷ (a)1987(b)1988(c)1961(d)1994

2.ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ಕರ್ನಾಟಕ ಸರ್ಕಾರ ಜಾರಿಗೊಳಿಸಿದ ಕಾರ್ಯಕ್ರಮ

(a)ಸ್ತ್ರೀ ಶಕ್ತಿ ಕಾರ್ಯಕ್ರಮ(b)ಸಾಕ್ಷರ ಭಾರತ (c)ಕುಟುಂಬ ಕಲ್ಯಾಣ (d)ಯುವತಿ ಮಂಡಲಗಳು

3.ಭಾರತದಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾದದ್ದು (a)1947(b)2001 (c)1956 (d)1988

4.ನಮ್ಮ ಜಾತ್ಯತೀತ ತತ್ವಕ್ಕೆ ವಿರೋಧವಾದದ್ದು(a)ಪ್ರಾದೇಶಿಕತೆಯ ಹೆಚ್ಚಳ (b)ಭ್ರಷ್ಟಾಚಾರ (c)ಅನಕ್ಷರತೆ (d)ಕೋಮುವಾದ

5. ಆಫ್ರಿಕಾದ ಗಾಂಧಿ ಎಂದು ಪ್ರಸಿದ್ಧರಾದವರು / ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದವರು

(a)ಬಾನ್ ಕಿ ಮೂನ್ (b)ಅಬ್ರಹಾಂ ಲಿಂಕನ್ (c)ಮಾರ್ಟಿನ್ ಲೂಥರ್ (d)ನೆಲ್ಸನ್ ಮಂಡೇಲ

6.ಭಾರತವು ಅಲಿಪ್ತ ನೀತಿಯನ್ನು ಅನುಸರಿಸಿದ್ದು (a)ಸ್ವತಂತ್ರ ಚಳುವಳಿ ಸಂದರ್ಭದಲ್ಲಿ (b)2 ನೇ ವಿಶ್ವ ಸಮರದ ನಂತರದಲ್ಲಿ

(c)2 ನೇ ವಿಶ್ವ ಸಮರದ ಸಂದರ್ಭದಲ್ಲಿ (d)ಭಾರತ ಮತ್ತು ಚೀನಾ ಯುದ್ಧ ಸಮಯದಲ್ಲಿ

7.'ಭಾರತ– ಚೀನ ದೇಶಗಳ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ.

(a)ಪಂಚಶೀಲ ಮತ್ತು ಹಿಂದಿ–ಚೀನೀ ಭಾಯಿಭಾಯಿ (b)ಕಮ್ಯುನಿಸ್ಟ್ ಮತ್ತು ಹಿಂದೂತತ್ವ

(c)ಆರ್ಥಿಕ ಮತ್ತು ರಾಜಕೀಯ ತತ್ವ (d)ಪ್ರಜಾಪ್ರಭುತ್ವ ಮತ್ತು ರಾಜಕೀಯ

8.ಭಾರತವು ಪಾಕಿಸ್ತಾನದೊಂದಿಗೆ ಉತ್ತಮ ಸಂಬಂಧವನ್ನು ಇರಿಸಿಕೊಂಡಿಲ್ಲ.ಏಕೆಂದರೆ

(a)ಈ ದೇಶಗಳ ಮಧ್ಯೆ ಭೌಗೋಳಿಕ ಸಾಮೀಪ್ಯವಿದೆ (b)ಇವುಗಳ ನಡುವೆ ನಾಗರಿಕ ಸಾಮೀಪ್ಯವಿದೆ

(c)ಪಾಕಿಸ್ತಾನವು ಭಯೋತ್ಪಾದನೆ ಪ್ರತಿಪಾದಿಸುತ್ತದೆ (d)ಪಾಕಿಸ್ತಾನದ ಮಿಲಿಟರಿಶಾಹಿತ್ವ ಮತ್ತು ರಾಜಕೀಯ ಅಸ್ಥಿರತೆ

9.ವಿಶ್ವಸಂಸ್ಥೆಯ ಇತಿಹಾಸದಲ್ಲಿ 1948 ಡಿಸೆಂಬರ್ 10 ಮಹತ್ವದ ದಿನವಾಗಿದೆ.ಏಕೆಂದರೆ

(a)ಮಾನವ ಹಕ್ಕುಗಳ ಘೋಷಣೆ (b)ವಿಶ್ವಸಂಸ್ಥೆಯ ಸ್ಥಾಪನೆ (c)ನಿಶ್ಶಸ್ತ್ರೀಕರಣ (d)ವರ್ಣಭೇದ ನೀತಿಯ ನಿಷೇಧ

10.ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ

(a)ಸಾಮಾನ್ಯಸಭೆ (b)ಭದ್ರತಾ ಸಮಿತಿ(c)ಸಚಿವಾಲಯ (d)ದತ್ತಿಸಮಿತಿ

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **7x1=7**

11.ಪ್ರಾಂತೀಯತೆ / ಪ್ರಾದೇಶಿಕತೆ ಎಂದರೇನು?

12.ಕೋಮುವಾದ ಎಂದರೇನು?

13.ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಯನ್ನು ಏಕೆ ಕೈಗೊಳ್ಳಲಾಯಿತು?

14.ವರ್ಣಭೇದ ನೀತಿಯು ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಹೇಗೆ ಮಾರಕವಾಗಿದೆ?

15.ನಾವು ಯುನಿಸೆಫ್ ಶುಭಾಶಯ ಪತ್ರಗಳನ್ನು ಏಕೆ ಕೊಂಡು ಕೊಳ್ಳಬೇಕು?

16.ಅಂತರ ರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಛೇರಿ ಎಲ್ಲಿದೆ?

17.ಸಾರ್ಕ್ ಸ್ಥಾಪನೆಯಾಗಿದ್ದು ಯಾವಾಗ?

III.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **7x2=14**

18.ಯುನೆಸ್ಕೋದ ಕಾರ್ಯಗಳನ್ನು ತಿಳಿಸಿ.

19.ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಿರಂತರವಾಗಿ ಪ್ರತಿಪಾದಿಸುತ್ತಿದೆ.ಈ ಹೇಳಿಕೆಯನ್ನು ಸಮರ್ಥಿಸಿ.

20.ಪ್ರಚಲಿತ ಜಗತ್ತಿಗೆ ನಿಶ್ಶಸ್ತ್ರೀಕರಣ ಅತಿ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ.? ವಿವರಿಸಿ.

21.ಭಯೋತ್ಪಾದಕರು/ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳಾವುವು?

22.ಅನಕ್ಷರತೆಯ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ

23.ಕೋಮುವಾದ ದೇಶದ ಐಕ್ಯತೆಗೆ ಮಾರಕವಾಗಿದೆ.ಹೇಗೆ?

24.ಬಡತನ ನಿವಾರಣೆಗಾಗಿ ಸರ್ಕಾರವು ಕೈಗೊಂಡಿರುವ ಯೋಜನೆಗಳು/ಕ್ರಮಗಳೇನು?

IV.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **3x3=9**

25.ಭಾರತದ ವಿದೇಶಾಂಗ ನೀತಿಯು ರೂಪುಗೊಳ್ಳಲು ಪ್ರಭಾವ ಬೀರಿದ ಅಂಶಗಳು ಯಾವುವು?

ಅಥವಾ

ಭಾರತ ಮತ್ತು ಅಮೆರಿಕಾ ಸಂಬಂಧವನ್ನು ಕುರಿತು ಬರೆಯಿರಿ.

26.ಭಾರತದ ವಿದೇಶಾಂಗ ನೀತಿಯ ಉದ್ದೇಶಗಳೇನು?

ಅಥವಾ

ಭಾರತ ಮತ್ತು ರಷ್ಯಾ ದೇಶಗಳ ನಡುವಿನ ಸಂಬಂಧವನ್ನು ವಿವರಿಸಿ.

27.ಅಂತರ ರಾಷ್ಟ್ರೀಯ ಸಂಬಂಧಗಳ ವೃದ್ಧಿಗಾಗಿ ಭಾರತವು ಅಳವಡಿಸಿಕೊಂಡಿರುವ ಪಂಚಶೀಲ ತತ್ವಗಳಾವುವು?

ಅಥವಾ

ಇತ್ತೀಚಿನ ದಿನಗಳಲ್ಲಿ ಭಾರತ ಮತ್ತು ಚೀನ ದೇಶಗಳ ನಡುವೆ ಬಾಂಧವ್ಯ ಹದಗೆಡಲು ಕಾರಣವಾದ ಅಂಶಗಳಾವುವು ?
ವಿವರಿಸಿ.

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ–04(ಸಮಾಜಶಾಸ್ತ್ರ ವಿಭಾಗ)

ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **10x1=10**

1.ಮಾನವ ಕುಲ ತಾನೊಂದೇ ವಲಂ ಎಂದು ಹೇಳಿದವರು (a)ಜನ್ನ (b)ಪಂಪ(c)ರನ್ನ (d)ಪೊನ್ನ

2.ಸಂವಿಧಾನದ_____ವಿಧಿಯು ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧ ಎಂದಿದೆ.

(a)11 ನೇ ವಿಧಿ(b)13 ನೇ ವಿಧಿ (c)17 ನೇ ವಿಧಿ (d)15 ನೇ ವಿಧಿ

3.ಅಸ್ಪೃಶ್ಯತಾ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ.

(a)ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ(b)ಪರಿಶಿಷ್ಟ ಪಂಗಡದ ಕಾಯ್ದೆ (c)ಮೀಸಲಾತಿ ಕಾಯ್ದೆ (d)ರಕ್ಷಣಾ ಕಾಯ್ದೆ

4.ಭಾರತದಲ್ಲಿ ಅಸ್ಪೃಶ್ಯತೆಯ ಆಚರಣೆಯು ಕಡಿಮೆಯಾಗುತ್ತಿದೆ.ಇದಕ್ಕೆ ಕಾರಣ

(a)ಕೋಮುವಾದ (b)ಕೈಗಾರಿಕೀಕರಣ (c)ಹೆಚ್ಚುತ್ತಿರುವ ಸಾಕ್ಷರತೆ (d)ಪ್ರಾದೇಶಿಕತೆಯ ಹೆಚ್ಚಳ

5. ಇಂದು ಸಮಾಜದಲ್ಲಿ ವರ್ಗ ವ್ಯವಸ್ಥೆ ಉಂಟಾಗಲು ಪ್ರಮುಖ ಕಾರಣ

(a)ವಸಾಹತುಕರಣ (b)ಕೈಗಾರಿಕೀಕರಣ (c)ಶಿಕ್ಷಣ (d)ಜನಸಂಖ್ಯೆ

6.ಭಾರತದ ಸಂವಿಧಾನದ 24 ನೇ ವಿಧಿಯು ಅತ್ಯಂತ ಪ್ರಮುಖವಾದುದು.ಏಕೆಂದರೆ

(a)ಅಸ್ಪೃಶ್ಯತೆಯನ್ನು ನಿಷೇಧಿಸಿದೆ (b)14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ದುಡಿಮೆಯನ್ನು ನಿಷೇಧಿಸಿದೆ

(c)ವರದಕ್ಷಿಣೆ ಪದ್ಧತಿಯನ್ನು ನಿಷೇಧಿಸಿದೆ (d)14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುತ್ತದೆ

7.'ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿಗೆ ಬಂದದ್ದು(a)1988(b)1969(c)1986 (d)1961

8.ಬಾಲ ಕಾರ್ಮಿಕ ಸಮಸ್ಯೆಗೆ ಮುಖ್ಯ ಕಾರಣ (a)ಕಡು ಬಡತನ (b)ಆಹಾರದ ಕೊರತೆ (c)ಅನಾರೋಗ್ಯ (d)ಅನಕ್ಷರತೆ

9.ಕರ್ನಾಟಕ ರಾಜ್ಯದಲ್ಲಿ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ

(a)ನಲಿ–ಕಲಿ (b)ಚಿಣ್ಣರ ಅಂಗಳ (c)ಬಾ ಮರಳಿ ಶಾಲೆಗೆ (d)ಕೂಲಿಯಿಂದ ಶಾಲೆಗೆ

10.'ಪ್ರಸವ ಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ'ಯು ಜಾರಿಗೆ ಬಂದದ್ದು

(a)1988(b)1969(c)1986 (d)1994

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **9x1=9**

11.ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

12.ಸಮಾನ ವೇತನ ಕಾಯಿದೆಯನ್ನು ಏಕೆ ಜಾರಿಗೆ ತರಲಾಯಿತು?

13.ಬಾಲ ಕಾರ್ಮಿಕ ಎಂದರೆ ಯಾರು?

14.ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರ.ಏಕೆ?

15.ಭಾರತ ಸರ್ಕಾರವು ಬಾಲ ಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿಯನ್ನು ಸ್ಥಾಪಿಸಿದೆ.ಏಕೆ?

16.ಬಾಲ ಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಕಡ್ಡಾಯವಾಗಿ ಭರಿಸಬೇಕಾದ್ದು ಏನು?

17.ಹೆಣ್ಣು ಭ್ರೂಣ ಹತ್ಯೆ ಎಂದರೇನು?

18.ವರದಕ್ಷಿಣೆ ಎಂದರೇನು?

19.ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಶ್ರಮಿಸಿದ ಮಹನೀಯರನ್ನು ಹೆಸರಿಸಿ

III.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **6x2=12**

20.ಪರಿಸರ ಸಂರಕ್ಷಣೆಗಾಗಿ ನಡೆದ ಸಾಮೂಹಿಕ ಪ್ರತಿಭಟನೆಗಳನ್ನು ಪಟ್ಟಿಮಾಡಿ.

21.ಮಹಿಳಾ ಸಬಲೀಕರಣದಲ್ಲಿ ಮಹಿಳಾ ಸ್ವ ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.

22.ಜನಮಂದೆ ಎಂದರೇನು? ಉದಾಹರಣೆ ಕೊಡಿ.

23.ಅಪ್ಪಿಕೋ ಚಳುವಳಿಯನ್ನು ವಿವರಿಸಿ.

24.ಚಿಪ್ಕೋ ಚಳುವಳಿಯನ್ನು ಏಕೆ ಕೈಗೊಳ್ಳಲಾಯಿತು?

25.ನರ್ಮದಾ ಬಚಾವೋ ಆಂದೋಲನವನ್ನು ಕುರಿತು ಬರೆಯಿರಿ.

IV.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **3x3=9**

26.ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ತಿಳಿಸಿ

ಅಥವಾ ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

27.ಸಾಮಾಜಿಕ ಸ್ತರ ವಿನ್ಯಾಸ ಎಂದರೇನು? ಸಾಮಾಜಿಕ ಸ್ತರ ವಿನ್ಯಾಸವು ಹೇಗೆ ಉಂಟಾಗುತ್ತದೆ?

ಅಥವಾ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳನ್ನು ತಿಳಿಸಿ.

28.ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪವನ್ನು ವಿವರಿಸಿ.

ಅಥವಾ ಅಸಂಘಟಿತ ಕೆಲಸಗಾರರ (ಕಾರ್ಮಿಕರು)ಎದುರಿಸುತ್ತಿರುವ ಸಮಸ್ಯೆಗಳು ಯಾವುವು?

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ–05(ಭೂಗೋಳಶಾಸ್ತ್ರ ಪತ್ರಿಕೆ–1)

	ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **10x1=10**

1.ನೈರುತ್ಯ ಮಾನ್ಸೂನ್ ಮಾರುತಗಳು ಭಾರತವನ್ನು ಈ ಎರಡು ಕವಲುಗಳಾಗಿ ಪ್ರವೇಶಿಸುತ್ತವೆ.

(a)ಅಂಡಮಾನ್ ಶಾಖೆ ಮತ್ತು ನಿಕೋಬರ್ ಶಾಖೆ (b)ಅರಬ್ಬಿಸಮುದ್ರ ಶಾಖೆ ಮತ್ತು ಬಂಗಾಳ ಕೊಲ್ಲಿ ಶಾಖೆ .

(c)ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟ ಶಾಖೆ (d)ಉತ್ತರ ಭಾರತ ಮತ್ತು ದಕ್ಷಿಣ ಭಾರತ ಶಾಖೆ

2.ಅಕ್ಟೋಬರ್ ತಿಂಗಳಲ್ಲಿ ಉಷ್ಣಾಂಶವು ಉತ್ತರಾರ್ಧಗೋಳದಲ್ಲಿ ಕಡಿಮೆಯಾಗಲು ಕಾರಣ

(a)ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದ ಮೇಲೆ ಲಂಬವಾಗಿ ಬೀಳುತ್ತವೆ

(b) ಸೂರ್ಯನ ಕಿರಣಗಳು ಉತ್ತರಾರ್ಧಗೋಳದ ಮೇಲೆ ಲಂಬವಾಗಿ ಬೀಳುತ್ತವೆ

(c) ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದ ಮೇಲೆ ಓರೆಯಾಗಿ ಬೀಳುವುದರಿಂದ

(d) ಸೂರ್ಯನ ಕಿರಣಗಳು ಉತ್ತರಾರ್ಧಗೋಳದ ಮೇಲೆ ಲಂಬವಾಗಿ ಬೀಳುವುದರಿಂದ

3.ಭಾರತವು ಈ ಮಾದರಿಯ ವಾಯುಗುಣವವನ್ನು ಹೊಂದಿದೆ. (a)ಉಷ್ಣವಲಯದ ಮಾನ್ಸೂನ್ ವಾಯುಗುಣ

(b)ಶೀತ ವಾಯುಗುಣ(c)ಉಷ್ಣವಾಯುಗುಣ(d)ಮಾನ್ಸೂನ್ ವಾಯುಗುಣ

4.ಏಪ್ರಿಲ್–ಮೇ ತಿಂಗಳುಗಳಲ್ಲಿ ದ್ವಿದಳ ಧಾನ್ಯ ಮತ್ತು ತರಕಾರಿಗಳನ್ನು ಬೆಳೆಯುವುದು ಈ ಬಗೆಯ ಬೇಸಾಯಕ್ಕೆ ಉದಾಹರಣೆ

(a)ಮುಂಗಾರು ಬೇಸಾಯ (b)ರಬಿ ಬೇಸಾಯ (c)ಜೇಡ್ ಬೇಸಾಯ (d)ಜೀವನಾಧಾರ ಬೇಸಾಯ

5. ಭಾರತದ ಪ್ರಮುಖ ನಾರಿನ ಬೆಳೆಗಳು :(a)ಭತ್ತ–ಗೋಧಿ (b)ಚಹಾ–ಕಾಫಿ(c)ಕಬ್ಬು–ಹೊಗೆಸೊಪ್ಪು (d)ಹತ್ತಿ–ಸೆಣಬು

6.ಭತ್ತವನ್ನು ಅತಿ ಹೆಚ್ಚು ಬೆಳೆಯುವ ರಾಜ್ಯ (a)ಪಂಜಾಬ್ (b)ಪಶ್ಚಿಮ ಬಂಗಾಳ (c)ಗೋವಾ (d)ಉತ್ತರ ಪ್ರದೇಶ

7.ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರ ದಿಂದ ಎರಡು–ಮೂರು ಬೆಳೆಗಳನ್ನು ಬೆಳೆಸುವುದು

(a)ಮಿಶ್ರ ಬೇಸಾಯ (b)ಸಾಂದ್ರ ಬೇಸಾಯ (c)ಜೀವನಾಧಾರ ಭೇಸಾಯ (d)ರಾಬಿ ಬೇಸಾಯ

8.ಡೆಕ್ಕನ್ ಟ್ರಾಪ್ ಪ್ರದೇಶದಲ್ಲಿ ಕಂಡು ಬರುವ ಮಣ್ಣು

(a)ಕೆಂಪು ಮಣ್ಣು(b)ಮೆಕ್ಕಲು ಮಣ್ಣು(c)ಪರ್ವತ ಮಣ್ಣು (d)ಕಪ್ಪುಮಣ್ಣು

9.ಬಿಹಾರದ ಕಣ್ಣೀರಿನ ನದಿ ಎಂದು ಕರೆಯುವ ನದಿ (a)ಕೋಸಿನದಿ (b)ಕೃಷ್ಣ (c)ಮಹಾನದಿ (d)ಗೋದಾವರಿ ನದಿ

10.ಸುವರ್ಣರೇಖಾ ಜಲ ವಿದ್ಯುತ್ ಯೋಜನೆ ಈ ರಾಜ್ಯದ ಯೋಜನೆಯಾಗಿದೆ.

(a)ಗುಜರಾತ್ (b)ಮಹಾರಾಷ್ಟ್ರ (c)ಬಿಹಾರ (d)ಒರಿಸ್ಸಾ

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **6x1=6**

11.ಇತ್ತೀಚೆಗೆ ನಮ್ಮ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಿದೆ ಏಕೆ ?

12.ದೇಶದೆಲ್ಲೆಡೆ ಮಳೆ ಬಂದರೂ ತಮಿಳುನಾಡಿಗೆ ಮಾತ್ರ ಮಳೆ ಬಾರದ ಋತು ಯಾವುದು?

13.ಕಾಲ ಬೈಸಾಕೆ ಎಂದರೇನು?

14.ಬೇಸಿಗೆಯಲ್ಲಿಯೂ ದಕ್ಷಿಣ ಭಾರತದಲ್ಲಿ ಉಷ್ಣಾಂಶದಲ್ಲಿ ಇಳಿಕೆ ಕಂಡು ಬರುತ್ತದೆ ಏಕೆ?

15.ಭಾರತವನ್ನು ಉಪಖಂಡ ಎಂದು ಕರೆಯುವರು ಏಕೆ?

16.ಭಾರತದ ಅತ್ಯಂತ ದಕ್ಷಿಣದ ಭಾಗವಾದ ಇಂದಿರಾ ಪಾಯಿಂಟ್ ಇರುವುದು ಎಲ್ಲಿ?

III.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **10x2=20**

17.ಶಿವಾಲಿಕ್ ಶ್ರೇಣಿಯ ಲಕ್ಷಣಗಳೇನು?

18.ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಗಳ ವ್ಯತ್ಯಾಸಗಳನ್ನು ತಿಳಿಸಿ.

19.ಭಾರತದ ವ್ಯವಸಾಯವನ್ನು ಮಾನ್ಸೂನ್ ಮಾರುತಗಳ ಜೊತೆಯಲ್ಲಿ ಆಡುವ ಜೂಜಾಟ ಎಂದು ಕರೆಯುವರು.ಏಕೆ?

20.ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು?

21.ಮೆಕ್ಕಲು ಮಣ್ಣು ಮತ್ತು ಕಪ್ಪು ಮಣ್ಣುಗಳ ನಡುವಿನ ವ್ಯತ್ಯಾಸ ತಿಳಿಸಿ.

22.ಮಣ್ಣಿನ ಸವೆತಕ್ಕೆ ಕಾರಣಗಳೇನು?

23.ಅರಣ್ಯ ಸಂರಕ್ಷಣೆಯ ವಿಧಾನಗಳನ್ನು ತಿಳಿಸಿ.

24.ಮ್ಯಾಂಗ್ರೋವ್ ಅರಣ್ಯಗಳ ಲಕ್ಷಣಗಳನ್ನು ತಿಳಿಸಿ.

25.ನಿತ್ಯಹರಿದ್ವರ್ಣದ ಅರಣ್ಯಗಳು ಮತ್ತು ಮರುಭೂಮಿ ಅರಣ್ಯಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

26.ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು?

IV.ಭಾರತದ ನಕ್ಷೆಯನ್ನು ಬರೆದು ಈ ಸ್ಥಳಗಳನ್ನು ಗುರುತಿಸಿ. 1+3=4

27. (a)ಭಾಕ್ರಾ ನಂಗಲ್ (b)82.5° ಪೂರ್ವ ರೇಖಾಂಶ (c)ನರ್ಮದಾ ನದಿ

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ-06(ಭೂಗೋಳಶಾಸ್ತ್ರ ಪತ್ರಿಕೆ-2)

	ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **5x1=5**

1.ಬಾಕ್ಸೈಟನ್ನು ಅದ್ಭುತ ಲೋಹವೆಂದು ಕರೆಯಲು ಕಾರಣ (a)ವೈವಿಧ್ಯಮಯ ಬಣ್ಣಗಳಿಂದ ಕೂಡಿರುತ್ತದೆ (b)ವೈವಿಧ್ಯಮಯ ಉಪಯೋಗಗಳಿಗೆ ಬಳಸಲ್ಪಡುತ್ತದೆ (c)ವೈವಿಧ್ಯಮಯ ವಸ್ತುಗಳ ಮಿಶ್ರಣವಾಗಿದೆ (d)ವಿವಿಧ ಲೋಹಗಳ ಮಿಶ್ರಣವಾಗಿದೆ

2. ಭಾರತದ ಅತಿ ದೊಡ್ಡ ತೈಲ ನಿಕ್ಷೇಪ (a)ಬಾಂಬೆ ಹೈ (b) ದಿಗ್ಬಾಯ್ (c) ಮುಂಬೈ (d) ಗೋದಾವರಿ ಮೈದಾನ

3.ಭಾರತದ ಮೊದಲ ಸೌರವಿದ್ಯುತ್ ಉತ್ಪಾದನಾ ಕೇಂದ್ರ. (a)ಚೆನ್ನೈ (b)ಮಧ್ರಾಸ್ (c)ರಾಜಸ್ತಾನದ ರೂಯಿ(d)ರಾಜಸ್ತಾನದ ಬಾರಾಮರ್

4.ಜ್ಞಾನಾಧಾರಿತ ಕೈಗಾರಿಕೆ ಎಂದರೆ (a)ಜೈವಿಕ ತಂತ್ರಜ್ಞಾನ(b)ಗಣಿಗಾರಿಕೆ (c)ಮಾಹಿತಿ ತಂತ್ರಜ್ಞಾನ ಕೈಗಾರಿಕೆ (d)ಸುಧಾರಿತ ತಂತ್ರಜ್ಞಾನ

5. ಕಡಲ ಕೊರೆತವು ಅತಿ ಹೆಚ್ಚು ಕಂಡುಬರುವ ಕಡಲತೀರದ ರಾಜ್ಯ (a)ಕೇರಳ (b)ಗೋವಾ (c)ಒರಿಸ್ಸಾ (d)ತಮಿಳುನಾಡು

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **10x1=10**

6.ಗಣಿಗಾರಿಕೆ ಪ್ರದೇಶದಲ್ಲಿ ಭೂಕುಸಿತ ಉಂಟಾಗಲು ಕಾರಣವೇನು?

7.ಜನಸಾಂದ್ರತೆ ಎಂದರೇನು?

8.ದೂರಸಂವೇದಿ ತಂತ್ರಜ್ಞಾನ ಎಂದರೇನು?

9.ಕೈಗಾರಿಕಾ ವಲಯ ಎಂದರೇನು?

10.ಪೆಟ್ರೋಲಿಯಂ ಅನ್ನು ದ್ರವರೂಪದ ಚಿನ್ನವೆಂದು ಕರೆಯಲು ಕಾರಣವೇನು?

11.ಅಭ್ರಕವನ್ನು ಟೆಲಿಫೋನ್ ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ.ಏಕೆ?

12.ಮುಂಬಯಿಯನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುತ್ತಾರೆ.ಏಕೆ?

13.ಭಾರತದಲ್ಲಿ ಮೊದಲು ಪೆಟ್ರೋಲಿಯಂ ಪತ್ತೆಯಾದ ಸ್ಥಳ ಯಾವುದು?

14.ಬೆಂಗಳೂರನ್ನು ಸಿಲಿಕಾನ್ ಸಿಟಿ ಎಂದು ಕರೆಯಲು ಕಾರಣವೇನು?

15.ಗಂಗಾ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿದೆ.ಏಕೆ?

III.ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **8x2=16**

16.ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ಕೈಗೊಳ್ಳಬಹುದಾದ ಪರಿಹಾರಕ್ರಮಗಳೇನು?

17.ಮ್ಯಾಂಗನೀಸ್ ಅದಿರಿನ ಉಪಯೋಗಗಳೇನು?

18.ಭೌಗೋಳಿಕ ಮಾಹಿತಿ ವ್ಯವಸ್ಥೆಯ ಉಪಯೋಗಗಳೇನು?

19.ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿ.

20.ಭೂಕುಸಿತಕ್ಕೆ ಕಾರಣಗಳೇನು?

21.ಚಂಡಮಾರುತದಿಂದಾಗುವ ಪರಿಣಾಮಗಳೇನು?

22.ಗ್ರಾಮೀಣ ಪ್ರದೇಶದ ಜನರ ನಗರ ವಲಸೆಯನ್ನು ತಡೆಗಟ್ಟುವ ಕ್ರಮಗಳನ್ನು ತಿಳಿಸಿ.

23.ತೀವ್ರಗತಿಯ ಜನಸಂಖ್ಯಾ ಬೆಳವಣಿಗೆಯು ದೇಶದ ಅಭಿವೃದ್ಧಿಗೆ ಮಾರಕವಾಗಿದೆ.ಹೇಗೆ?

IV.ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. **3x3=9**

24.ಭಾರತದಲ್ಲಿ ರಸ್ತೆ ಸಾರಿಗೆಯು ಎದುರಿಸುತ್ತಿರುವ ಸಮಸ್ಯೆಗಳೇನು?

ಅಥವಾ ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

25.ಭಾರತದ ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿಗಳಲ್ಲಿರುವ ಬಂದರುಗಳನ್ನು ಪಟ್ಟಿಮಾಡಿ.

ಅಥವಾ ಸುಧಾರಿತ ತಂತ್ರಜ್ಞಾನದ ಬಳಕೆಯಿಂದಾದ ಬದಲಾವಣೆಗಳೇನು?

26.ಭಾರತದಲ್ಲಿ ರಸ್ತೆ ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ **ಅಥವಾ** ಭಾರತದ ಕೈಗಾರಿಕಾ ವಲಯಗಳನ್ನು ಪಟ್ಟಿಮಾಡಿ.

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ–07(ಅರ್ಥಶಾಸ್ತ್ರ ವಿಭಾಗ)

	ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **10x1=10**

1.ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ.ಕಾರಣ

(a)ಆದಾಯವು ಜನರ ನಡುವೆ ಹೇಗೆ ಹಂಚಿಕೆಯಾಗಿದೆ ಎಂದು ತಿಳಿಸುವುದಿಲ್ಲ (b)ದೇಶದ ಆರ್ಥಿಕ ಸ್ಥಿತಿಯು ಹದಗೆಡುತ್ತದೆ.

(c)ಒಂದು ದೇಶದಲ್ಲಿ ರಾಷ್ಟ್ರದ ಆದಾಯ ಹೆಚ್ಚಾದಂತೆ ಜನಸಂಖ್ಯೆಯಲ್ಲಿ ಹೆಚ್ಚಳವಾದರೆ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುವುದಿಲ್ಲ.

(d)ಕೃಷಿಯೇತರ ಚಟುವಟಿಕೆಗಳು ಬದಲಾಗುತ್ತವೆ.

2.ಹಸಿರು ಕ್ರಾಂತಿಯು ಇದನ್ನು ಸೂಚಿಸುತ್ತದೆ.

(a)ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳ (b)ಮೀನುಗಳ ಉತ್ಪಾದನೆಯಲ್ಲಿ ಹೆಚ್ಚಳ

(c)ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳ (d)ಮಾಂಸದ ಉತ್ಪಾದನೆಯಲ್ಲಿ ಹೆಚ್ಚಳ

3.ಭಾರತದ ಆರ್ಥಿಕ ಯೋಜನೆಯ ಪಿತಾಮಹ

(a)ಎಂ.ಎಸ್.ಸ್ವಾಮಿನಾಥನ್ (b)ಸರ್.ಎಂ.ವಿಶ್ವೇಶ್ವರಯ್ಯ (c)ನಾರ್ಮನ್ ಬೋರ್ಲಾಗ್ (d)ನೆಹರು

4.ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವ ಪ್ರಾಧಿಕಾರ

(a) ರಿಸರ್ವ್ ಬ್ಯಾಂಕ್ (b)ಕೇಂದ್ರ ಹಣಕಾಸು ಇಲಾಖೆ (c)ಯೋಜನಾ ಆಯೋಗ(d)ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

5. ಭಾರತದ ನೈಜ ಅಭಿವೃದ್ಧಿಯೇ ಗ್ರಾಮಗಳ ಅಭಿವೃದ್ಧಿ ಎಂದವರು

(a)ಮಹಾತ್ಮ ಗಾಂಧೀಜಿ (b)ವಿನೋಬಾ ಭಾವೆ (c)ದಾದಾಭಾಯಿ ನವರೋಜಿ (d)ನೆಹರು

6.ಸರ್ಕಾರದ ಒಂದು ವರ್ಷದ ಅಂದಾಜು ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ

(a)ಸಾರ್ವಜನಿಕ ಹಣಕಾಸು (b)ಆಯವ್ಯಯ (c)ಯೋಜನಾ ವೆಚ್ಚ (d)ಸಾರ್ವಜನಿಕ ವೆಚ್ಚಗಳು

7.ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು

(a)ಹಣಕಾಸು ಸಚಿವರು (b)ಪ್ರಧಾನ ಮಂತ್ರಿ (c)ಸಭಾಧ್ಯಕ್ಷರು (d)ರಕ್ಷಣಾ ಸಚಿವರು

8.ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸ್ಥಾಪನೆಯಾಗಿದ್ದು (a)1950 (b)1952 (c)1976 (d)1951

9.11 ನೇ ಪಂಚವಾರ್ಷಿಕ ಯೋಜನೆ ಈ ವಿಷಯಕ್ಕೆ ಪ್ರಾಮುಖ್ಯತೆಯನ್ನು ನೀಡಲಾಯಿತು.

(a)ವ್ಯವಸಾಯಕ್ಕೆ (b)ಸಾರಿಗೆಗೆ (c)ಕೈಗಾರಿಕೆಗೆ (d)ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ

10.ಸರ್ಕಾರದ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ ಅದನ್ನು ಹೀಗೆ ಕರೆಯುವರು.

(a)ಉಳಿತಾಯದ ಆಯವ್ಯಯ (b)ತೆರಿಗೆ (c)ಕೊರತೆಯ ಆಯವ್ಯಯ (d)ಸಮತೋಲನ ಆಯವ್ಯಯ

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **9x1=9**

11.ತಲಾದಾಯವನ್ನು ಹೇಗೆ ಕಂಡುಹಿಡಿಯಲಾಗುತ್ತದೆ?

12.ಮಾನವ ಅಭಿವೃದ್ಧಿ ಸೂಚಿಯನ್ನು ಅರ್ಥೈಸಿ.

13.ಮಹಿಳಾ (ಸ್ತ್ರೀ)ಸಬಲೀಕರಣ ಎಂದರೇನು?

14.ಮಾನವ ಅಭಿವೃದ್ಧಿ ಸೂಚಿಯನ್ನು ಏಕೆ ಸ್ಥಾಪಿಸಲಾಯಿತು?

15.ಹಸಿರು ಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯುವರು?

16.ಪ್ರತ್ಯಕ್ಷ ತೆರಿಗೆ ಎಂದರೇನು ?

17.ಸದಾ ಹಸಿರು ಕ್ರಾಂತಿ ಎಂದರೇನು?

18.ಜಾಗತೀಕರಣ ಎಂದರೇನು?

19.ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಹೇಗೆ ಅಳೆಯಲಾಗುವುದು?

III.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **6x2=12**

20.ತಲಾ ಆದಾಯವು ಅಭಿವೃದ್ಧಿಯ ನೈಜ ಮಾಪಕವಾಗಲಾರದು.ಏಕೆ?

21.ಉದಾರೀಕರಣವು ಉತ್ಪಾದಕರಿಗೆ ಅನುಕೂಲ.ಹೇಗೆ?

22.ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನ್ನು ತಿಳಿಸಿ.

23.ಸದ್ಯದಲ್ಲಿ ಕೃಷಿವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?

24.ಖಾಸಗೀಕರಣವನ್ನು ಉತ್ತೇಜಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

25.ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು?

IV.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **3x3=9**

26.ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸಿನ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

27.ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ವಿವರಿಸಿ.

ಅಥವಾ ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳು ಯಾವುವು?

28.ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪಾತ್ರವೇನು?.

ಅಥವಾ ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

ವಿಷಯ: ಸಮಾಜವಿಜ್ಞಾನ

ಅಭ್ಯಾಸ ಪತ್ರಿಕೆ–08(ವ್ಯವಹಾರ ಅಧ್ಯಯನ ವಿಭಾಗ)

ಅಂಕಗಳು:40

I.ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **10x1=10**

1.ಬ್ಯಾಂಕುಗಳ ಬ್ಯಾಂಕ್(ಬ್ಯಾಂಕುಗಳ ತಾಯಿ)ಎಂದು ಕರೆಯಲಾಗುವ ಬ್ಯಾಂಕು

(a)ಸಹಕಾರಿ ಬ್ಯಾಂಕ್ (b)ಕೆನರಬ್ಯಾಂಕ್ (c)ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (d)ಭಾರತೀಯ ರಿಸರ್ವ್ ಬ್ಯಾಂಕ್

2.ರಾಷ್ಟ್ರೀಯ ಉಳಿತಾಯ ಪತ್ರ ಗಳನ್ನು ಈ ಸಂಸ್ಥೆ ಯು ನೀಡುತ್ತದೆ.

(a)ಅಂಚೆ ಕಛೇರಿ (b)ಕೇಂದ್ರ ಬ್ಯಾಂಕ್ (c)ವಾಣಿಜ್ಯ ಬ್ಯಾಂಕ್ (d)ರಿಸರ್ವ್ ಬ್ಯಾಂಕ್

3.ವ್ಯಕ್ತಿಯೊಬ್ಬನು ಭವಿಷ್ಯತ್ತಿನಲ್ಲಿ ಕಾರು ಖರೀದಿಸಲು ಪ್ರತಿ ತಿಂಗಳು ನಿಯಮಿತವಾಗಿ ಉಳಿತಾಯ ಮಾಡಲು ಈ ಬ್ಯಾಂಕ್ ಖಾತೆಯನ್ನು ತೆರೆಯಬೇಕು.

(a)ಉಳಿತಾಯ ಖಾತೆ (b)ಚಾಲ್ತಿಖಾತೆ (c)ಆವರ್ತ ಠೇವಣಿ ಖಾತೆ (d)ನಿಶ್ಚಿತ ಠೇವಣಿ ಖಾತೆ

4.ಒಂದು ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ

(a)ಉಳಿತಾಯ ಖಾತೆ (b)ಚಾಲ್ತಿಖಾತೆ (c)ಆವರ್ತ ಠೇವಣಿ ಖಾತೆ (d)ನಿಶ್ಚಿತ ಠೇವಣಿ ಖಾತೆ

5. ಭಾರತದ ದೂರದರ್ಶನ ಕ್ಷೇತ್ರದ ರಾಣಿ ಎಂದು ಹೆಸರು ಪಡೆದವರು

(a)ಕಿರಣ್ ಮಜುಂದಾರ್ ಷಾ (b)ಏಕ್ತಾ ಕಪೂರ್ (c)ಅಜೀಂ ಪ್ರೇಮ್ ಜಿ (d)ಪ್ರಮೀಳಾದೇವಿ

6.ಬಿಳಿಯ ಕ್ರಾಂತಿಯ ಪಿತಾಮಹ ಎಂದು ಖ್ಯಾತರಾದವರು

(a)ವರ್ಗೀಸ್ ಕುರಿಯನ್ (b)ಅಜೀಂ ಪ್ರೇಮ್ ಜಿ (c)ನಾರಾಯಣ ಮೂರ್ತಿ (d)ಪ್ರತಾಪ ರೆಡ್ಡಿ

7.ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು (a)ವರ್ಗೀಸ್ ಕುರಿಯನ್ (b)ಪ್ರತಾಪ ರೆಡ್ಡಿ (c)ನಾರಾಯಣ ಮೂರ್ತಿ (d)ಅಜೀಂ ಪ್ರೇಮ್ ಜಿ

8.NASDAQ ನಲ್ಲಿ ನೊಂದಾಯಿಸಿಕೊಂಡ ಭಾರತದ ಮೊದಲ ತಂತ್ರಜ್ಞಾನ ಸಂಸ್ಥೆ

(a)ರಿಲಯನ್ಸ್ (b)ಬಯೋಕಾನ್ (c)ಇನ್ಫೋಸಿಸ್ (d)ವಿಪ್ರೋ

9.ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯಾದ ವರ್ಷ .(a)1988 (b)1978 (c)1985 (d)1979

10.ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಕಛೇರಿ ಇರುವುದು.(a)ವಾಷಿಂಗ್ ಟನ್ (b)ರೋಮ್ (c)ಜಿನೇವಾ (d)ಪ್ಯಾರಿಸ್

II.ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **7x1=7**

11.ಉದ್ಯಮಿ ಎಂದರೆ ಯಾರು?

12.ಜೆಟ್ ವಾಯುಮಾರ್ಗವನ್ನು ಹುಟ್ಟುಹಾಕಿದ ಉದ್ಯಮಿ ಯಾರು?

13.ಅಪೋಲೋ ಆಸ್ಪತ್ರೆಗಳ ರುವಾರಿ ಯಾರು?

14.ಉದ್ಯಮಗಾರಿಕೆ ಎಂದರೇನು?

15.ಉದ್ಯಮಿಯು ದೇಶವೊಂದರ ಸಂಪತ್ತು ಹೇಗೆ?

16.ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಯಿತು?

17.ಬ್ಯಾಂಕ್ ಸಾಲ ಎಂದರೇನು?

III.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **7x2=14**

18.ಜಾಗತೀಕರಣವು ವಿಶ್ವದಾದ್ಯಂತ ಆರ್ಥಿಕ ಚಳುವಳಿಯಾಗಿದೆ.ಈ ಹೇಳಿಕೆಯನ್ನು ಸಮರ್ಥಿಸಿ

19.ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ.ಹೇಗೆ?

20.ಜಾಗತೀಕರಣವು ಸಾಂಪ್ರದಾಯಿಕ ಆಹಾರ ಸೇವನೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ.ವಿವರಿಸಿ

21.ಜಾಗತೀಕರಣದ 4 ಲಕ್ಷಣಗಳನ್ನು ತಿಳಿಸಿ.

22.ಜಾಗತೀಕರಣದ 4 ಅನುಕೂಲ ತಿಳಿಸಿ

23.ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳೇನು?

24.ವಿಮೆಯ ತತ್ವಗಳನ್ನು ತಿಳಿಸಿ.

IV.ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **3x3=9**

25.ಉಳಿತಾಯ ಖಾತೆ ಮತ್ತು ಚಾಲ್ತಿಖಾತೆಗಳ ವ್ಯತ್ಯಾಸಗಳನ್ನು ತಿಳಿಸಿ

ಅಥವಾ ಜೀವ ವಿಮೆ ಮತ್ತು ಸಾಮಾನ್ಯ ವಿಮೆಗೂ ಇರುವ ವ್ಯತ್ಯಾಸಗಳೇನು?

26.ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದಾಗುವ ಉಪಯೋಗಗಳೇನು?

ಅಥವಾ ವಿಮೆಯ ಪ್ರಾಮುಖ್ಯತೆಯನ್ನು ತಿಳಿಸಿ

27.ಬ್ಯಾಂಕ್ ಖಾತೆಯನ್ನು ತೆರೆಯುವಾಗ ಅನುಸರಿಸಬೇಕಾದ ವಿಧಾನಗಳನ್ನು ತಿಳಿಸಿ..

ಅಥವಾ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ಅನುಸರಿಸಬೇಕಾದ ವಿಧಾನಗಳನ್ನು ವಿವರಿಸಿ.